ಹೋಗುತ್ತಿದ್ದರು. ಬೆತ್ತ ನೋಡಿ ಗಪ್ಪಾಗುತ್ತಿದ್ದ ಮಕ್ಕಳು ಅವರು ಮತ್ತೆ ಅತ್ತ ಸರಿದಾಗ ತಮ್ಮ ಗುಜುಗುಜು ಸಂತೆಯನ್ನು ಬಿಚ್ಚುತ್ತಿದ್ದರು.

ಎಲ್ಲಾ ಶಿಕ್ಷಕರು, ಅವರೊಂದಿಗೆ ಬಂದ ಗರಿಗರಿ ಬಿಳಿಪಂಚೆ ಅಂಗಿ ತೊಟ್ಟ ನಾಲ್ಕಾರು ಮುಖಂಡರು ಕೊಠಡಿ ತುಂಬಿಕೊಂಡರು. ಆ ಒಬ್ಬ ಶಿಕ್ಷಕ ಮಾತ್ರ ಮಕ್ಕಳ ನಡುವೆಯೇ ನಿಂತು ಗುಜುಗುಜುಗೆ ತಡೆ ಹಾಕುವ ಹೋರಾಟವನ್ನು ಜಾರಿಯಲ್ಲಿಡುವ ಪ್ರಯತ್ನದಲ್ಲಿ ನಿರತನಾಗಿದ್ದ. ಇಸ್ತ್ರಿ ಮಾಡಲಾಗಿದ್ದ ಬಿಳಿ ಅಂಗಿಯ ನಿಡಿದಾದ ಗೆರೆಗಳು ಸೇರಿದ ಸಭೆಗೆ ಒಂದು ಗಾಂಭೀರ್ಯವನ್ನು ಕರುಣಿಸಿದ್ದವು. ಪರಸು ಈಗ ಬಿಸಿಲುಕೋಲಿನ ಗೊಡವೆ ಬಿಟ್ಟು ಇನ್ನೇನು ಸರ್ಕಸ್ ಶುರುವಾಗಬಹುದೆಂಬ ಕುತೂಹಲದಲ್ಲಿ ಕಣ್ಣುಗಳನ್ನು ತುಸು ಹೆಚ್ಚೆ ಅರಳಿಸಿಕೊಂಡು ನೋಡತೊಡಗಿದ.

ಕಾರ್ಯಕ್ರಮ ಪ್ರಾರಂಭವಾಯಿತು. ಏಳನೇ ತರಗತಿ ಆಶಾ ನಮೊ ಶಾರದೆ ಹಾಡಿದಳು. ಅವಳ ಹಾಡಿನ ನಂತರ ಶಿಕ್ಷಕರು ಏನೇನೊ ಹೇಳಿದರು. ಪರಸುನನ್ನು ಸೆಳೆಯುವ ಮಾತುಗಳೇನೂ ಆಗಿರಲಿಲ್ಲ ಅವು. ಮಾತು ಮುಗಿದು ಚಪ್ಪಾಳೆ ಶುರುವಾದದ್ದೆ ತಾನು ಕೈ ಜೋಡಿಸಿ ಚಪ್ಪಾಳೆ ಬಾರಿಸಿದ. ವಾಹ್! ಎಂತಹ ಮಜಾ ಇದೆ ಅನಿಸಿತು. ಮಾತಿನ ಮಧ್ಯೆ ಆಗಾಗ ಬೀಳುತ್ತಿದ್ದ ಚಪ್ಪಾಳೆಯ ಸುಳಿವು ಹಿಡಿದು ಅವನೂ ತೀರ ಖುಷಿಯಲ್ಲೆ ಚಪ್ಪಾಳೆ ಬಾರಿಸತೊಡಗಿದ. ಇಡೀ ಸಭೆಯಲ್ಲಿ ಮೋಜು ಎನಿಸಿದ್ದು ಅದೊಂದೆ ಅವನಿಗೆ. ಶಿಕ್ಷಕರು, ಬಿಳಿ ಪಂಚೆಯವರು ಗಂಭೀರವಾಗಿ ನಿಂತು ಗಾಳಿಯೊಡನೆ ಹೊಡೆದಾಡುವಂತೆ ಕೈಗಳನ್ನು ಆಡಿಸುತ್ತಾ ಮಾತಾಡುತ್ತಿದ್ದದ್ದು ಏನೆಂಬುದು ಪರಸುಗೆ ಸ್ಪಷ್ಟವಾಗುತ್ತಿರಲಿಲ್ಲ. ಸ್ವಾತಂತ್ರ್ಯ, ಹೋರಾಟ, ಗಾಂಧೀಜಿ, ಸುಭಾಷ್ ಚಂದ್ರ ಬೋಸ್, ಸರ್ಕಾರ, ಗುರಿಗಳು... ಹೀಗೆಯೆ ಪರಸು ಎಂದೂ ಕೇಳಿರದ ಪದಗಳು ಅವನ ಕಿವಿ ಮೇಲೆ ಬೀಳುತ್ತಿದ್ದವು. ಅವು ತನ್ನ ಲೋಕಕ್ಕೆ ಸಂಬಂಧಿಸದವು ಎಂದು ತೀರ್ಮಾನಿಸಿ ಚಪ್ಪಾಳೆ ಹೊಡೆಯುವ ಅವಕಾಶಕ್ಕಾಗಿ ಕಾದು ಕೂತಿದ್ದ. ಬರೀ ಅವವೆ ಮಾತುಗಳು ಅವನಿಗೆ ರೇಜಿಗೆ ಹುಟ್ಟಿಸಿದವು. ಎಲ್ಲರ ಬಾಯಲ್ಲಿ ಬರುತ್ತಿದ್ದ ಗಾಂಧಿ ಅನ್ನುವ ಮಾತು ಮತ್ತು ಅಲ್ಲಿ ಇಡಲಾಗಿದ್ದ ಫೋಟೊಗೂ ತಾನೇ ಒಂದು ಸಂಬಂಧ ಕಲ್ಪಿಸಿಕೊಂಡ. ಅವರೇ ಗಾಂಧಿ ಇರಬಹುದೆಂದು ತೀರ್ಮಾನಿಸಲು ಅವನಿಗೆ ಧೈರ್ಯ ಸಾಲಲಿಲ್ಲ. ಇದ್ದರೂ ಇರಬಹುದು ಬಿಡು ಎಂದುಕೊಂಡು ಸುಮ್ಮನಾದ. ಬರೀ ಮಾತುಗಳೇ ತುಂಬಿರುವ ಈ ಸಭೆಯ ಊಸಾಬರಿಯೆ ಬೇಡವೆಂದುಕೊಂಡು ಮತ್ತೆ ತಾನು ಬಿಸಿಲುಕೋಲಿನೊಂದಿಗೆ ಆಟಕ್ಕೆ ಇಳಿದ. ಚಪ್ಪಾಳೆಹೊತ್ತಿಗೆ ಮತ್ತೆ ಸಭೆಗೆ ಹಾಜರಾಗಿ ತಕ್ಷಣವೇ ಬಿಸಿಲುಕೋಲಿನೆಡೆಗೆ ಮರಳುತ್ತಿದ್ದ.

ಸಭೆ ಮತ್ತು ಬಿಸಿಲುಕೋಲುಗಳ ಮಧ್ಯದಲ್ಲಿ ಹೊಯ್ದಾಡುತ್ತಿದ್ದ ಪರಸುಗೆ, ಗುರುಗಳೊಬ್ಬರು ಸಭೆಯಿಂದ ಹೆಸರಿಡಿದು ಕೂಗಿದ್ದೇ ಒಂದು ಕ್ಷಣ ಗಲಿಬಿಲಿ ಮೂಡಿತು. 'ಮೂರನೇ ತರಗತಿಯ ನೂರು ಮೀಟರ್ ಓಟದಲ್ಲಿ ಪ್ರಥಮ ಸ್ಥಾನ ಪಡೆದ ಪರಸು...' ಅಂತ ಏನೇನೊ ಕೇಳಿಸಿಕೊಂಡ ಪರಸು ಮತ್ತಷ್ಟು ಗೊಂದಲಗೊಂಡ. ಈಗ ತಾನೇನು ಮಾಡೋದು ಎಂಬುದು ಅವನಿಗೆ ತೋಚಲಿಲ್ಲ. 'ಪರಸು ಬಾ ಪರಸು...' ಎಂದು ಮತ್ತೆ ಮತ್ತೆ ಕೂಗಿದಾಗ, ಯಾವುದೊ ಹೊಸ ಜಗತ್ತಿನೊಳಗೆ ನುಗ್ಗುವ ಅನಾಮಿಕನಂತೆ ಎದ್ದು ವೇದಿಕೆಯ ಬಳಿ ನಡೆದ. ಎಡಗೈಯಲ್ಲಿ ಎಂದಿಗಿಂತ ಜಾರುವ ತನ್ನ ಚಡ್ಡಿ ಹಿಡಿದುಕೊಳ್ಳುವುದನ್ನು ಮರೆಯಲಿಲ್ಲ. ಒಬ್ಬ ಬಿಳಿ ಅಂಗಿ, ಪಂಚೆಯ ಧಡೂತಿಯೊಬ್ಬ ಪರಸುವಿನ ಕೈಗೆ ಒಂದು ಸೀಸದ ಕಡ್ಡಿಯನ್ನು ನೀಡಿದ. ಚಪ್ಪಾಳೆ ಬಿದ್ದವು. ತಾನೂ ಚಪ್ಪಾಳೆ ಬಾರಿಸಬೇಕೊ ಬೇಡವೊ ಎಂಬುದು ಪರಸುಗೆ ತಿಳಿಯಲಿಲ್ಲ. ಕೈಯಲ್ಲಿ ಸೀಸದ ಕಡ್ಡಿ ಇಲ್ಲದಿದ್ದರೆ ತಾನೂ ಬಾರಿಸಬಹುದಿತ್ತು ಅನಿಸಿತು. ಈ ಕ್ಷಣಕ್ಕೆ ಸೀಸದ ಕಡ್ಡಿಯಾದರೂ ಏಕೆ ನನ್ನ ಕೈಗೆ ಬರಬೇಕಿತ್ತು ಅಂದುಕೊಂಡು ತಿರುಗಿ ಬಂದು ತನ್ನ ಬಿಸಿಲುಕೋಲಿನ ಜಗತ್ತನ್ನು ಹೊಕ್ಕ. ಎಳೆಯ ಬಿಸಿಲುಕೋಲು ಈಗ ತರುಣನಾಗಿತ್ತು.

ಅವನ ಕೈಯಲ್ಲೀಗ ಮೂರು ಇಂಚಿನ ಸೀಸದ ಕಡ್ಡಿಯ ತುಣುಕು ಕೂತಿತ್ತು. ತಪಸ್ಸಿಗೆ ಸಿಕ್ಕ ವರದಂತೆ ಕಾಣಿಸಿತು. ಒಂದು ತುಂಡು ಸೀಸದ ಕಡ್ಡಿಗಾಗಿ ತಾನು ಅಪ್ಪ, ಅವ್ವನ ಬಳಿ ಮಾಡಿದ ರಾದ್ಧಾಂತಗಳು ನೆನಪಾದವು. ಅದನ್ನು ಮೇಲೆ ಕೆಳಗೆ, ಆಚೆ ಈಚೆ ತಿರುವಿ ತಿರುವಿ ನೋಡಿದ. ನಟ್ಟ ನಡುವೆ ಬರೆಯುವ ಮಸಿಯ ಕಡ್ಡಿಯನ್ನು ತೂರಿಸಿದವರ್‍ಯಾರು? ಮರದ